ಪರಿಷತ್ತುಗಳಲ್ಲಿ ಖಾಯಂಗೊಳಿಸಲು ಕ್ರಮವನ್ನು ತೆಗೆದುಕೊಂಡಿರುತ್ತೆ. ಆರ್.ಎಲ್.ಇ.ಜಿ.ಪಿ. ಯೋಜನೆ ಅಡಿಯಲ್ಲಿ ನೇಮಕವಾಗಿರುವ ಸಿಬ್ಬಂದಿಯೂ ಸಹಾ, ಹಿಂದಿನ ಡಿ.ಆರ್.ಡಿ.ಎಸ್. ಮತ್ತು ಎನ್.ಆರ್.ಇ.ಪಿ. ಹಾಗೂ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಲ್ಲಿನ ಸಿಬ್ಬಂದಿಯನ್ನು ಖಾಯಂಗೊಳಿಸಿದಂತೆ ಅವರನ್ನೂ ಸೇವೆಯಲ್ಲಿ ಖಾಯಂಗೊಳಿಸಬೇಕೆಂದು ಕೋರುತ್ತಿದ್ದಾರೆ.ಆರ್.ಎಲ್.ಇ.ಜಿ.ಪಿ. ಸಿಬ್ಬಂದಿಯನ್ನು ಲೋಕೋಪಯೋಗಿ ಇಲಾಖೆಯು ನೇಮಿಸಿದ್ದಿದ್ದರಿಂದ ಆ ಇಲಾಖೆಯನ್ನು ಸದರಿ ಸಿಬ್ಬಂದಿಯನ್ನು ಖಾಯಂಗೊಳಿಸುವ ಬಗ್ಗೆ ಪರಿಶೀಲಿಸಲು ಕೋರಲಾಯಿತು. ಆದರೆ ಆ ಇಲಾಖೆಯು ಸದರಿ ಆರ್.ಎಲ್.ಇ.ಜಿ.ಪಿ. ಯೋಜನೆಗೆ ನೇಮಿಸಿದ ಸಿಬ್ಬಂದಿಯನ್ನು ಖಾಯಂಗೊಳಿಸಲು ಅಸಮರ್ಥತೆಯನ್ನು ವ್ಯಕ್ತ ಪಡಿಸುತ್ತಾ, ಆ ಇಲಾಖೆಯಲ್ಲಿಯೇ ಈಗ ಸುಮಾರು ಸಿಬ್ಬಂದಿಯನ್ನು ತೆಗೆದು ಹಾಕಬೇಕೆನ್ನುವ ಪ್ರಪಾದನೆಯಿದೆಯೆಂದೂ, ಅದರಲ್ಲಿ ಕೆಲವು ಸಹಾಯಕ ಇಂಜಿನಿಯರ್‌ಗಳು ಮತ್ತು ಕಿರಿಯ ಇಂಜಿನಿಯರ್‌ಗಳು ಇರುತ್ತಾರೆಂದೂ, ಮತ್ತು ಈಗ ಈ ಸಿಬ್ಬಂದಿಯು ಜಿಲ್ಲಾ ಪರಿಷತ್ತುಗಳಲ್ಲಿ ಕೆಲಸ ಮಾಡುತ್ತಿರುವುದರಿಂದ, ಈ ಇಲಾಖೆಯನ್ನೇ ಇದರ ಬಗ್ಗೆ ಪರಿಶೀಲಿಸಲು ತಿಳಿಸಿರುತ್ತೆ.

ಇದರ ಬಗ್ಗೆ, ಪ್ರಸ್ತುತ ಕೊಡುಗು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತುಗಳಿಂದ ಮಾತ್ರ ಪ್ರಪಾದನೆಗಳು ಬಂದಿರುತ್ತವೆ. ಆದ್ದರಿಂದ ಉಳಿದ ಜಿಲ್ಲಾ ಪರಿಷತ್ತುಗಳಲ್ಲಿನ ಪ್ರಸ್ತುತ ಪರಿಸ್ಥಿತಿಯನ್ನು ತಿಳಿದುಕೊಂಡು ಸದರಿ ವಿಷಯವನ್ನು ಪರಿಶೀಲಿಸಲಾಗುವುದು.

ಅಂತೂ ಸದರಿ ವಿಷಯವು ಸರ್ಕಾರದ ಪರಿಶೀಲನೆಯಲ್ಲಿ ಇರುತ್ತದೆ.

(4) ಗ್ರಾಮ ಸಹಾಯಕರುಗಳನ್ನು "ಡಿ" ದರ್ಜೆಯ ನೌಕರರನ್ನಾಗಿ ಪರಿಗಣಿಸುವುದು

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):—ಮಾನ್ಯ ಅಧ್ಯಕ್ಷರೇ,ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದುಡಿಯುತ್ತಿರುವ ಗ್ರಾಮ ಸಹಾಯಕರು ಸರಿಯಾದ ಸಂಬಳವಿಲ್ಲದೆ ದೈನಂದಿನ ಜೀವನ ಸಾಗಿಸಲು ತುಂಬಾ ಕಷ್ಟಪಡುವಂತಹ ಪರಿಸ್ಥಿತಿ ಇದೆ. ಅವರಿಗೆ ಈಗ ತಿಂಗಳಿಗೆ ಸಿಗುವ ಸಂಬಳ ಹದಿನೈದು ದಿನಸಗಳಿಗೂ ಸಾಕಾಗುವುದಿಲ್ಲ. ಅಲ್ಲದೆ ಅವರಿಗೆ ಯಾವುದೇ ತರಹದ ಸವಲತ್ತುಗಳಿಲ್ಲದೆ ವಂಚಿತರಾಗಿದ್ದಾರೆ. ಜೀತಪದ್ಧತಿಯನ್ನು ನಿರ್ಮೂಲ ಮಾಡಬೇಕೆಂದು ಹೇಳುವ ಸರಕಾರ ಅವರನ್ನು ಜೀತದಾಳುಗಳಾಗಿ ದುಡಿಸುವುದು ಸರ್ವಥಾ ಸರಿಯಲ್ಲ. ಮತ್ತು ಅವರು ಪೂರ್ತಿ ಸಮಯ ಕೆಲಸ ಮಾಡಬೇಕಾಗಿರುವುದರಿಂದಲೂ ಈಗಿನ ಸಂಬಳ ಏನೇನೂ ಸಾಲದಿರುವುದರಿಂದಲೂ ಮತ್ತು ಹಲವಾರು ವರ್ಷಗಳಿಂದ ಅದೇ ಹುದ್ದೆಯಲ್ಲಿ ದುಡಿಯುತ್ತಿರುವುದರಿಂದಲೂ ಅವರಿಗೆ ಕಡೇ ಪಕ್ಷ ರೂ. 600 ರಷ್ಟಾದರೂ ಕೊಡಬೇಕು. ಹಾಗೂ ಅವರನ್ನು 'ಡಿ' ದರ್ಜೆಯ ನೌಕರರನ್ನಾಗಿ ಪರಿಗಣಿಸಬೇಕಾಗಿ ಸರಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):— ಕರ್ನಾಟಕ ಗ್ರಾಮಾಧಿಕಾರಿಗಳ ರದ್ದಿಯಾತಿ ಕಾಯಿದೆ 1961 ರನ್ವಯ ಎಲ್ಲಾ ಅನುವಂಶೀಯ ಗ್ರಾಮಾಧಿಕಾರಿಗಳ ಹುದ್ದೆಗಳನ್ನು ದಿನಾಂಕ 1–2–1963 ರಿಂದ ರದ್ದುಪಡಿಸಲಾಯಿತು. ಈ ಸ್ಥಾನದಲ್ಲಿದ್ದವರನ್ನು ಆಗಿಂದಾಗ್ಗೆ ಸರ್ಕಾರದ ಆಡಳಿತಾತ್ಮಕ ಆದೇಶಗಳನ್ವಯ ದಿನಾಂಕ 31–12–1978 ರವರೆಗೆ ಪರ್ಯಾಯ ವ್ಯವಸ್ಥೆ ಮಾಡುವ ತನಕ ಮುಂದುವರಿಸಲಾಯಿತು. ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 3 ಎಂವಿಎಸ್ 77 ದಿನಾಂಕ 16–6–1978 ರ ಮೇರೆಗೆ 8,941 ಸ್ಟೈಫಂಡರಿ ಗ್ರಾಮ ಸಹಾಯಕರ ಹುದ್ದೆಗಳನ್ನು ಗ್ರಾಮಸ್ಥರಿಗೆ ಮತ್ತು ಗ್ರಾಮಲೆಕ್ಕಾಧಿಕಾರಿಗಳಿಗೆ ಸಹಾಯ ಮಾಡಲು ತಿಂಗಳಿಗೆ 100 ರೂ. ಗಳ ನಿಗದಿತ ಸಂಭಾವನೆ ಮೇಲೆ ಮಂಜೂರು ಮಾಡಲಾಯಿತು. ಈ ನಿಗದಿತ ಮಾಸಿಕ ಸಂಭಾವನೆ ರೂ. 100 ಅನ್ನು ರೂ. 120 ಗಳಿಗೆ ದಿನಾಂಕ 5–6–1961 ರ ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ 232 ಎಂವಿಎಸ್ 81 ರಲ್ಲಿ ಹೆಚ್ಚಿಸಲಾಯಿತು

ಪುನಃ 1,509 ಹೆಚ್ಚುವರಿ ಸ್ಟೈಪೆಂಡರಿ ಗ್ರಾಮ ಸಹಾಯಕರ ಹುದ್ದೆಗಳನ್ನು ನಿಗದಿತ ತಿಂಗಳ ಸಂಭಾವನೆ ರೂ. 120 ರಂತೆ ಸರ್ಕಾರ ಆದೇಶ ಸಂಖ್ಯೆ ಆರ್‌ಡಿ 82 ಎಂವಿಎಸ್ (1) 82 ದಿನಾಂಕ 23–9–82 ರ ಆದೇಶದಲ್ಲಿ ಮಂಜೂರು ಮಾಡಲಾಯಿತು. ಗ್ರಾಮಸಹಾಯಕರ ಸಂಘದ ಕೋರಿಕೆಯ ಮೇರೆಗೆ ಮಾಸಿಕ ನಿಗದಿತ ಸಂಭಾವನೆ 120 ರೂ. ಗಳನ್ನು 150 ರೂ. ಗಳಿಗೆ ದಿನಾಂಕ 4–1–1986 ರಿಂದ ಜಾರಿಗೆ ಬರುವಂತೆ ಆದೇಶ ಸಂಖ್ಯೆ ಆರ್‌ಡಿ 120 ಎಂವಿಎಸ್ 86 ದಿನಾಂಕ 7–5–1986 ರ ಮೇರೆಗೆ ಹೆಚ್ಚಿಸಲಾಯಿತು. ಮಾಸಿಕ ನಿಗದಿತ ಸಂಭಾವನೆ 150 ರೂ. ಗಳನ್ನು ದಿನಾಂಕ 1–11–1986 ರಿಂದ ಜಾರಿಗೆ ಬರುವಂತೆ 300 ರೂ. ಗಳಿಗೆ ಹೆಚ್ಚಿಸಲಾಗಿದೆ. ಗ್ರಾಮ ಸಹಾಯಕರನ್ನು 'ಡಿ' ದರ್ಜೆ ನೌಕರರನ್ನಾಗಿ ಪರಿಗಣಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

ಗ್ರಾಮ ಸಹಾಯಕರ ಈಗಿನ ಮಾಸಿಕ ನಿಗದಿತ ಸಂಭಾವನೆ 300 ರೂ. ಗಳನ್ನು 500 ರೂ. ಗಳಿಗೆ ಹೆಚ್ಚಿಸುವ ವಿಷಯವನ್ನು ಸರ್ಕಾರ ಒಪ್ಪಿದೆ. ಈ ಬಗ್ಗೆ ಸರ್ಕಾರದ ಆದೇಶವನ್ನು ಶೀಘ್ರದಲ್ಲಿಯೇ ಹೊರಡಿಸಲಾಗುವುದು.

(5) ಬೆಂಗಳೂರು ಹೆನ್ನೂರು ಬಾಣಸವಾಡಿ ಒಂದನೇ ಬ್ಲಾಕಿನಿಂದ ಬೆಂಗಳೂರು ನಗರ ಬಸನಿಲ್ದಾಣಕ್ಕೆ ಬಸ್ಸುಗಳನ್ನು ಓಡಿಸುವುದು.

ಶ್ರೀ ಎಂ.ಪಿ. ವೆಂಕಟೇಶ್ :– ಮಾನ್ಯ ಸಭಾಪತಿಯವರೆ, ಹೆನ್ನೂರು ಬಾಣಸವಾಡಿ ಒಂದನೇ ಬ್ಲಾಕಿನಿಂದ ಬೆಂಗಳೂರು ನಗರ ಸಾರಿಗೆ ಬಸ್ಸು ನಿಲ್ದಾಣ, ಶಿವಾಜಿನಗರ, ಬಸ್ ನಿಲ್ದಾಣಗಳಿಗೆ ನಗರ ಸಾರಿಗೆ ಬಸ್ಸುಗಳನ್ನು ಓಡಿಸದಿರುವುದರಿಂದ ಸದರಿ ಬಡಾವಣೆಯಲ್ಲಿನ ಸಾರ್ವಜನಿಕರಿಗೆ ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗೆ, ಸರ್ಕಾರೀ ನೌಕರರಿಗೆ ಹಾಗೂ ಎಲ್ಲಾ ವರ್ಗದ ಜನರಿಗೆ ತೊಂದರೆಯಾಗಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಬಡಾವಣೆಗೆ ನಗರ ಸಾರಿಗೆ ಬಸ್ಸುನ್ನು ಓಡಿಸುವಂತೆ ಮಾನ್ಯ ಸಾರಿಗೆ ಮಂತ್ರಿಗಳನ್ನು ಕೋರುತ್ತೇನೆ.

ಶ್ರೀ ಆಜೀಜ್ ಸೇಠ್:– (ಸಾರಿಗೆ ಸಚಿವರು) ಮಾನ್ಯ ಅಧ್ಯಕ್ಷರೇ,

ಹೆಣ್ಣೂರು– ಬಾಣಸವಾಡಿ ಲೇಔಟ್‌ನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಇತ್ತೀಚೆಗೆ ಅಭಿವೃದ್ಧಿಪಡಿಸಿದೆ. ಈ ಲೇಔಟ್‌ನ ಒಂದನೇ ಬ್ಲಾಕ್ ಕೆಲಮಟ್ಟಿಗೆ ಅಭಿವೃದ್ಧಿಯಾಗಿದ್ದಾಗ್ಯೂ ಹೆಚ್ಚಿನ ನಿವೇಶನಗಳು ಖಾಲಿ ಇದ್ದು ಪ್ರದೇಶವು ಇನ್ನೂ ಅಭಿವೃದ್ಧಿಯಾಗ ಬೇಕಾಗಿದೆ.

ಈ ಪ್ರದೇಶದ ಈಗೀನ ನಿವಾಸಿಗಳ ಅನುಕೂಲಕ್ಕಾಗಿ ಬೆಂಗಳೂರು ನಗರ ಸಾರಿಗೆ ವಿಭಾಗವು ಬೆಂಗಳೂರು ಬಸ್‌ನಿಲ್ದಾಣದಿಂದ ಮಾರುತಿಸೇವಾನಗರ ಮತ್ತು ಹೆಣ್ಣೂರು–ಬಾಣಸಾವಾಡಿ 1ನೇ ಬ್ಲಾಕ್ ಮಾರ್ಗವಾಗಿ ಬಾಬಸಾಹೇಬ್ ಪಾಳ್ಯಕ್ಕೆ ಒಂದು ಸಾರಿಗೆ ಸೌಕರ್ಯವನ್ನು ಒದಗಿಸಲಾಗಿದೆ. ಈ ಸಾರಿಗೆಯ ಸೌಕರ್ಯವನ್ನು ಸದರೀ ನಿವಾಸಿಗಳ ಅಪೇಕ್ಷೆಯಂತೆ ಸುಭಾಷ್ ನಗರಕ್ಕೆ ಸಂಪರ್ಕ ನೀಡುವಂತೆ ಕಲ್ಪಿಸಲಾಗಿದೆ.

ಬೆಂಗಳೂರು ನಗರ ಸಾರಿಗೆ ವಿಭಾಗವು ಬಾಣಸವಾಡಿ ಗ್ರಾಮದಿಂದ

(1) ನಗರ ಮಾರುಕಟ್ಟೆ –ಮಾರ್ಗ ಸಂಖ್ಯೆ 303 –1 ಬಸ್ಸು

(2) ಶಿವಾಜಿನಗರ – ಮಾರ್ಗ ಸಂಖ್ಯೆ 300– 3 ಬಸ್ಸುಗಳು

(3) ಬೆಂಗಳೂರು ಬಸ್ಸು ನಿಲ್ದಾಣ – ಮಾರ್ಗ ಸಂಖ್ಯೆ 300ಬಿ – 1 ಬಸ್ಸು

ಹೀಗೆ ಸಾರಿಗೆ ಸೌಕರ್ಯವನ್ನು ಹಾಗೂ ಕಲ್ಕರೆಯಿಂದ ಬಾಣಸವಾಡಿ ಮಾರ್ಗವಾಗಿ (ಮಾರ್ಗ ಸಂಖ್ಯೆ 301) ಒಂದು ಬಸ್ಸು ಹಾಗೂ ರಾಮಮೂರ್ತಿನಗರದಿಂದ ಬಾಣಸವಾಡಿ ಮಾರ್ಗವಾಗಿ ಶಿವಾಜಿನಗರಕ್ಕೆ ಒಂದು ಬಸ್ಸಿನ ಸೌಕರ್ಯವನ್ನು ಬೆಂಗಳೂರು ನಗರ ಸಾರಿಗೆ ವಿಭಾಗವು ಒದಗಿಸಿದೆ.